ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ, ಹರಿಹರ
ಸಿಸಿ 27/2016

ಪಿ ಡಬ್ಲ್ಯೂ-30

ಸಾಕ್ಷಿಯ ಹೆಸರುಃ ಮಲ್ಲಿಕಾರ್ಜುನಪ್ಪ ಸಿ ಡಬ್ಲ್ಯೂ-37

ತಂದೆಯ ಹೆಸರುಃ ಬಸವರಾಜಪ್ಪ

ವಯಸ್ಸುಃ 55

ಉದ್ಯೋಗಃ ವ್ಯವಸಾಯ

ವಾಸಸ್ಥಳಃ ಹೊನ್ನಾಳಿ

ಸಾಕ್ಷಿಯನ್ನು ದಿನಾಂಕ ಃ03 .03.2020 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

ಮುಖ್ಯ ವಿಚಾರಣೆಃ ಸ ಸ ಅ ರವರಿಂದಃ

ಆರೋಪಿ ನನಗೆ ಗೊತ್ತು. ನಾನು ವ್ಯವಸಾಯ ಮಾಡುತ್ತೇನೆ. ನಾನು ಭತ್ತವನ್ನು ಬೆಳೆಯುತ್ತೇನೆ. ಸುಮಾರು 10 ವರ್ಷದ ಹಿಂದೆ ನಾನು ನನ್ನ ಜಮೀನಿನಲ್ಲಿ ಭತ್ತ ಬೆಳೆದಿದ್ದೆ. ಆರೋಪಿಗೆ ಸದರಿ ಭತ್ತವನ್ನು ವ್ಯವಹಾರ ಮಾಡಿ ಕೊಟ್ಟಿರುತ್ತೇನೆ. ಸದರಿ ಮಾತುಕತೆ ನಂದಿತಾವರೆಯಲ್ಲಿರುವ ಮಿಲ್ ನಲ್ಲಿ ಮಾಡಿರುತ್ತೇವೆ. ನಾನು , ಆರೋಪಿ ಮತ್ತು ಇತರೇಯವರು ಸೇರಿ ಮಾತುಕತೆ ಮಾಡಿರುತ್ತೇವೆ. ನನ್ನ ಭತ್ತಕ್ಕೆ ಪ್ರತಿ ಕ್ವಿಂಟಲ್ ಗೆ 1200/- ಅಂತೆ 58 ಚೀಲ ಕೊಟ್ಟಿರುತ್ತೇನೆ. ಅದಕ್ಕೆ 49 ಸಾವಿರದ ಚಿಲ್ಲರೆ ಆಗಿರುತ್ತದೆ. ಸದರಿ ಹಣ 20 ದಿನದ ನಂತರ ಕೊಡುತ್ತೇನೆ ಎಂದು ಹೇಳಿದ್ದ. ನಾನು ಸದರಿ ಭತ್ತವನ್ನು ಮಿಲ್ಲಗೆ ಕಳುಹಿಸಿರುತ್ತೇನೆ. 20 ದಿನ ಆದ ನಂತರ ಎಲ್ಲೊ ಹೋಗಿದ್ದಾನೆ ಅಂತ ಸುದ್ದಿ ಬಂತು ಆದ್ದರಿಂದ ನಾನು ನಂದಿತಾವರೆ ಮಿಲ್ಲಗೆ ಬಂದಿರುತ್ತೇವೆ. ರಾತ್ರಿ ಅಲ್ಲೆ ಇದ್ದು ಬೆಳಗ್ಗೆಯು ಅಲ್ಲಿ ಇದ್ದು ಅಲ್ಲಿ ಬಹಳ ಜನ ಸೇರಿದ್ದರು. ನಂತರ ಊರಿಗೆ ಹೋಗಿರುತ್ತೇನೆ.ಆರೋಪಿ ಹಣ ಕೊಡದೇ ನಮಗೆ ಮೋಸ ಮಾಡಿರುತ್ತಾನೆ. ಆ ಸಂಬಂದ ಮಲೇಬೆನ್ನೂರು ಪೋಲಿಸ್ ಠಾಣೆಯಲ್ಲಿ ಕೇಸು ಆಗಿರುತ್ತದೆ. ಸಾಕ್ಷಿ ನ್ಯಾಯಾಲಯದಲ್ಲಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾನೆ.

ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಆರ್ ಪಿ ವಕೀಲರಿಂದಃ

ನನ್ನ ಹೆಸರಿಗೆ ಯಾವುದೇ ಜಮೀನು ಇಲ್ಲ ಎನ್ನುವುದು ನಿಜ. ಚಾಂದ್ ಪೀರ್ ಎನ್ನುವ ವ್ಯಕ್ತಿ ಗೊತ್ತು. ನನ್ನ ಮತ್ತು ಚಾಸಾ 34 ರಿಂದ 36 ರವರ ಭತ್ತವನ್ನು ಚಾಂದ್ ಪೀರ್ ಬಂದು ತುಂಬಿಕೊಂಡು ಬಂದಿರುತ್ತಾನೆ. ಒಂದು ತಿಂಗಳ ನಂತರ ಕೊಡುವುದಾಗಿ ತಿಳಿಸಿದ್ದ ಎಂದು ಪೋಲಿಸರ ಮುಂದೆ ನಾನು

ಹೇಳಿಲ್ಲ. ಹಣವನ್ನು ಒಂದು ತಿಂಗಳ ನಂತರ - - - – - - - – 48,380 ರೂಗಳನ್ನು ಕೊಡಬೇಕಾಗಿದೆ ಎಂದು



ಓದಿ ಹೇಳಲಾದ ಹೇಳಿಕೆಯ ಭಾಗವನ್ನು ಸಾಕ್ಷಿ ಸುಳ್ಳು ಎಂದು ಅಲ್ಲಗಳೆದಿದ್ದರಿಂದ ಸದರಿ ಹೇಳಿಕೆಯ ಭಾಗವನ್ನು ನಿಡಿ 8 ಎಂದು ಗುರುತಿಸಲಾಯಿತು. ಭತ್ತದ ಮಾತುಕತೆಯನ್ನು ಚಾಂದ್‌ಪೀರ್ ಊರಿಗೆ ಬಂದು ಮಾತನಾಡಿರುತ್ತಾನೆ. ನನಗೆ ಆರೋಪಿಗೆ ವೈಯಕ್ತಿಕವಾಗಿ ಸಂಪರ್ಕ ಇರಲಿಲ್ಲ ಎನ್ನುವುದು ನಿಜ. ಚಾಸಾ 34 ರಿಂದ 36 ರವರ ಭತ್ತವನ್ನೂ ಸಹ ಚಾಂದ್ ಪೀರ ಲೋಡ್ ಮಾಡಿಕೊಂಡು ಬಂದಿರುತ್ತಾನೆ ಎನ್ನುವುದು ನಿಜ. ಆರೋಪಿ ಮೂಲತಃ ನಂದಿತಾವರೆ ಗ್ರಾಮದವನಿದ್ದು ಅಲ್ಲಿ ಅವನ ಹೆಂಡತಿ ಮಕ್ಕಳು ಮತ್ತು ಆಸ್ತಿ ಇರುತ್ತದೆ ಎನ್ನುವುದು ನಿಜ. ಈಗಲೂ ಸಹ ಅವನು ನಂದಿತಾವರೆ ಗ್ರಾಮದಲ್ಲಿ ಇರುತ್ತಾನೆ ಎನ್ನುವುದು ನಿಜ. ಆರೋಪಿಯಿಂದ ನನಗೆ ಹಣ ಬರುವುದು ಇದೆ ಎಂದು ಸಿವಿಲ್ ಕೇಸನ್ನು ನಾನು ಸಲ್ಲಿಸಿಲ್ಲ. ಪಿರ್ಯಾದಿಯನ್ನು ಯಾರು ಯಾರ ಮೇಲೆ ಕೊಟ್ಟಿರುತ್ತಾರೆ ಎಂದು ಹೇಳಲು ಆಗುವುದಿಲ್ಲ. ಪೋಲಿಸರು ಬಂದು ಸಾಕ್ಷಿ ಎಂದು ಹೇಳಿದ್ದರಿಂದ ಬಂದು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ನಿಜ. ಆರೋಪಿಗೆ ನಾನು ಭತ್ತ ಕೊಟ್ಟ ಕುರಿತು ರಸೀದಿಯನ್ನು ಪೋಲಿಸರ ಮುಂದೆ ಹಾಜರು ಪಡಿಸಿಲ್ಲ. ನಾನು ಬೆಳೆದಂತಹ ಭ್ರತ್ತವನ್ನು ಆರೋಪಿಗೆ ಕೊಟ್ಟಿರುವ ಕುರಿತು ನನ್ನ ಬಳಿ ಯಾವುದೇ ದಾಖಲೆ ಇರುವುದಿಲ್ಲ. ಆರೋಪಿ ಊರು ಬಿಟ್ಟು ಹೋಗಿರುವ ವಿಷಯವನ್ನು ನನಗೆ ಯಾರು ಹೇಳಿರುತ್ತಾರೆ ಎಂದು ಹೇಳಲು ಆಗುವುದಿಲ್ಲ. ರೈತರು ಬೆಳದ ಬಳೆಯನ್ನು ಮಾರಾಟ ಮಾಡಲು ಎ ಪಿ ಎಂ ಸಿ ಇರುತ್ತದೆ ಎನ್ನುವುದು ನಿಜ. ರೈತರು ತಾವು ಬೆಳೆದಂತಹ ಬೆಳೆಯನ್ನು ಸೂಕ್ತ ದರ ಸಿಗಬೇಕು ಎಂದರೆ ಎ ಪಿ ಎಂ ಸಿ ಮೂಲಕ ಮಾರಾಟ ಮಾಡಬೇಕು ಎನ್ನುವುದು ನಿಜ. ಆರೋಪಿ ಊರು ಬಿಟ್ಟು ಹೋಗಿರುತ್ತಾನೆ ಎಂದು ಗೊತ್ತಾದ ನಂತರ ನಾನು ಪೋಲಿಸರಿಗೆ ಪಿರ್ಯಾದಿಯನ್ನು ಕೊಡಲು ಪ್ರಯತ್ನ ಮಾಡಿಲ್ಲ. ಆರೋಪಿಗೆ ನಾನು ಎಂದಿಗೂ ಭತ್ತ ಮಾರಾಟಕ್ಕೆ ಕೊಟ್ಟಿಲ್ಲ ಆರೋಪಿ ಮತ್ತು ನನ್ನ ಮಧ್ಯ ಯಾವುದೇ ವ್ಯವಹಾರ ನಡೆದಿಲ್ಲ ಮತ್ತು ಆರೋಪಿಯಿಂದ ನನಗೆ ಯಾವುದೇ ಹಣ ಬರುವುದು ಬಾಕಿ ಉಳಿದಿಲ್ಲ ಹಾಗೂ ಆರೋಪಿ ನನಗೆ ಯಾವುದೇ ರೀತಿ ಆರೋಪಿ ಮಾಡದೇ ಇದ್ದರೂ ಸಹ ಆರೋಪಿ ಮಾಡಿರುತ್ತಾನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ಚಾಂದಪೀರ್ ನಿಗೆ ಮಾರಾಟ ಮಾಡಿದ್ದರೂ ಸಹ ಆರೋಪಿಗೆ ಭತ್ತ ಮಾರಾಟ ಮಾಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ ಹರಿಹರ